**D.W-2**

**( ದಿನಾಂಕ: 21-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** ಶ್ರೀ P.N.S ವಕೀಲರಿಂದ,

ವಾದಿ ಸರಕಾರಿ ನೌಕರ ಎಂದರೆ ಸರಿ . ವಾದಿ ಇತ್ತೀಚೆಗೆ ನಿವೃತ್ತಿ ಹೊಂದಿರುತ್ತಾರೆ. ವಾದಿಗೆ ನಿವೃತ್ತಿ ಕಾಲಕ್ಕೆ ಸುಮಾರು 1 ಲಕ್ಷ ವೇತನ ಇತ್ತು ಎಂದರೆ ಸರಿ . ವಾದಿ SBI Bank ನಿಂದ ತನ್ನ ವೇತನದಿಂದ ಮೇಲೆ ಸಾಲ ಪಡೆದಿದ್ದ ಎಂದರೆ ಇರಬಹುದು. ಸದರಿ ಸಾಲವನ್ನು ವಾದಿಯೇ ನಿವೃತ್ತಿ ಕಾಲಕ್ಕೆ ಪೂರ್ತಿ ಮುಟ್ಟಿಸಿರುತ್ತಾನೆ ಎಂದರೆ, ಸಾಕ್ಷಿ ಎಲ್ಲರೂ ಕಲತೆ ಮುಟ್ಟಿಸಿರುತ್ತೇವೆ ಎಂದು ನುಡಿಯುತ್ತಾರೆ . ಸಂಬಳದಿಂದಲೇ ಸದರಿ ಸಾಲ ಸಂಪೂರ್ಣ ಮುಟ್ಟಿರುತ್ತದೆ ಎಂದರೆ ಸರಿಯಲ್ಲ. ಸಾಲದ ತುಂಬಿದ ಬಗ್ಗೆ ನಮ್ಮ ಹತ್ತಿರ ಯಾವುದೇ ದಾಖಲೆಗಳು ಇರುವುದಿಲ್ಲ. ಏಕೆಂದರೆ ಕುಟುಂಬದ ಪ್ರಮುಖ ವಾದಿಯೇ ಇದ್ದ ಎಂದು ನುಡಿಯುತ್ತಾರೆ. ಸದರಿ ಸಾಲ ಮನೆ ಕಟ್ಟಲು ವಾದಿ ಪಡೆದಿದ್ದ ಎಂದರೆ ಸರಿಯಲ್ಲ.

ಸದರಿ ಸಾಲದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ವಾದಿ ತನ್ನ ಸ್ವಯರ್ಜಿತ ಹಾಗೂ ಸಂಬಳದಿಂದ ಕಟ್ಟಿದ ಮನೆಯಲ್ಲಿ ಪಾಲು ಬೇಕೆಂಬ ದೂರದ್ದೇಶದಿಂದ ನಾವು ಸುಳ್ಳು ತಕರಾರು ಸಲ್ಲಿಸಿ ಹಾಗೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

ಪಾಟೀ ಸವಾಲುಃ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು, ಆಳಂದ**